**ಓ ಎಸ್ ನಂ 451/2022**
**ಪಿ. ಡಬ್ಲ್ಯೂ ಃ 1**

**ದಿಃ 18.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ 5 ರವರ ಪರ ಶ್ರೀ ಎ ಎಂ ಜಿ ವಕೀಲರಿಂದ ಃ**

ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ನಮ್ಮ ವಕೀಲರಿಗೆ ನಾನೇ ಹೇಳಿ ಬರೆಯಿಸಿರುತ್ತೇನೆ. ದಾವಾ ಸ್ವತ್ತುಗಳು ನನ್ನ ತಾತ ಈರಗೆತ್ತಯ್ಯನ ಸ್ವತ್ತುಗಳಾಗಿರುತ್ತವೆ. ನಿ ಪಿ 1 ರಂತೆ ನನ್ನ ತಾತನ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಕಿರುವುದಿಲ್ಲ ಎಂದರೆ ಸರಿ. ನನ್ನ ತಾತನಿಗೆ ಎಷ್ಟು ಜನ ಮಕ್ಕಳೆಂದು ನನಗೆ ಗೊತ್ತಿಲ್ಲ.

ಕೃಷ್ಣಮೂರ್ತಿ ಮತ್ತು ಲಕ್ಷ್ಮೀದೇವಿ ಯಾರೆಂದು ನನಗೆ ಗೊತ್ತಿಲ್ಲ. ಆರ್ ನರಸಿಂಹಮೂರ್ತಿ ಮತ್ತು ಆರ್ ಗುಟ್ಟಮ್ಮ ಯಾರೆಂದು ನನಗೆ ಗೊತ್ತಿಲ್ಲ. ನನಗೆ ಚಿಕ್ಕಣ್ಣ ಮತ್ತು ಭಾಗ್ಯಮ್ಮ ನವರು ನನ್ನ ಚಿಕ್ಕಪ್ಪನ ಮಕ್ಕಳಾಗಿರುತ್ತಾರೆ. ದಾವಾ ಐಟಂ ನಂಬರ್ 1 ಯಾರ ಆಸ್ತಿ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳಿ ನಂತರ ಅದು ನಮ್ಮ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಐಟಂ ನಂಬರ್ 2 ನನ್ನ ತಾತನ ಆಸ್ತಿಯಾಗಿದ್ದು, ಅದು ನನ್ನ ತಂದೆಗೆ ನನ್ನ ತಾತನ ಮರಣದ ನಂತರ ಬಂದಿರುತ್ತದೆ. ದಾವಾ ಐಟಂ ನಂಬರ್ 3 ಕೂಡ ನಮ್ಮ ತಾತನ ಆಸ್ತಿಯಾಗಿರುತ್ತದೆ. ನನ್ನ ತಾತನ ಆಸ್ತಿ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ನೀಡಲು ನನ್ನ ಹತ್ತಿರ ಯಾವುದೇ ದಾಖಲಾತಿಗಳು ಇರುವುದಿಲ್ಲ.

ದಾವಾ ಸ್ವತ್ತುಗಳು ನಮ್ಮ ತಂದೆ ತಾಯಿರದ್ದು ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ನಾನು ಭಾಗ ಕೇಳಿ ಈ ದಾವೆಯನ್ನು ಹೂಡಿರುತ್ತೇನೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಎ ಎಂ ಜಿ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**